KAHS200008972019

# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆಲೂರು

ಉಪಸ್ಥಿತರುಃ- ಶ್ರೀಮತಿ ಸ್ನೇಹಾ ಎಂ.
ಬಿ.ಎ.,ಎಲ್ಎಲ್.ಬಿ.,
ಸಮವೃತ್ತಿಃ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಆಲೂರು.

**ಸಿ.ಸಿ.ಸಂಖ್ಯೆ.314/2019**

**ದಿನಾಂಕಃ 1ನೇ ಏಪ್ರಿಲ್ 2026**

ಪಿರ್ಯಾದುದಾರರುಃ ಕರ್ನಾಟಕ ಸರ್ಕಾರದ ಪರವಾಗಿ,
ಠಾಣಾಧಿಕಾರಿಗಳು, ಆಲೂರು
ಪೋಲೀಸ್ ಠಾಣೆ, ಆಲೂರು.
(**ಸಹಾಯಕ ಸರ್ಕಾರಿ ಅಭಿಯೋಜಕರು**)

-ವಿರುದ್ಧ-

ಆರೋಪಿಗಳು 1. ಚಂದ್ರೇಗೌಡ ಬಿನ್ ದೊಡ್ಡೇಗೌಡ
ಸುಮಾರು 39 ವರ್ಷ

ವಾಸಃ ಸಿಂಗಾಪುರ ಗ್ರಾಮ,
ಪಾಳ್ಯ ಹೋಬಳಿ, ಆಲೂರು ತಾಲ್ಲೂಕು,
ಹಾಸನ ಜಿಲ್ಲೆ.

(ಆರೋಪಿ ಪರ ಶ್ರೀ.**ಬಿ.ಎಂ.ಜಿ.**, ವಕೀಲರು)

| | | |
|---|---|---|
| 1. | ಅಪರಾಧ ಘಟಿಸಿದ ದಿನಾಂಕಃ | 03.03.2019 |
| 2. | ಅಪರಾಧ ವರದಿಯಾದ ದಿನಾಂಕಃ | 03.03.2019 |
| 3. | ಆರೋಪಿಸಲಾದ ಕಲಂಗಳುಃ | ಭಾರತೀಯ ದಂಡ ಸಂಹಿತೆ ಕಲಂ 498(ಎ), 323 ಮತ್ತು 504 |
| 4. | ವಿಚಾರಣೆ ಪ್ರಾರಂಭವಾದ ದಿನಾಂಕಃ | 28.10.2022 |
| 5. | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕಃ | 30.01.2026 |
| 6. | ತೀರ್ಪು ನೀಡಿದ ದಿನಾಂಕಃ | 01.04.2026 |
| 7. | ಪೀಠಾಸೀನಾಧಿಕಾರಿಗಳ ಅಭಿಪ್ರಾಯಃ | ಆರೋಪಿಯನ್ನು ನಿರ್ದೋಷಿ ಎಂದು ಪರಿಗಣಿಸಿದೆ. |

## ತೀರ್ಪು

ಈ ಪ್ರಕರಣವನ್ನು ಆಲೂರು ನಗರ ಠಾಣೆಯ ಪೊಲೀಸರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 498(ಎ), 323 ಮತ್ತು 504 ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತು ದಾಖಲಿಸಿರುತ್ತಾರೆ.

**2**. ದಿನಾಂಕಃ 03.03.2019 ರಂದು ಸಂಜೆ ಸುಮಾರು 10.30 ಗಂಟೆಯ ಸಮಯದಲ್ಲಿ ಆಲೂರು ಪೊಲೀಸ್ ಠಾಣಾ ಸರಹದ್ದಿನ ಸಿಂಗಾಪುರ ಗ್ರಾಮದಲ್ಲಿ ಆರೋಪಿಗೆ ಕೊಟ್ಟು ಮದುವೆ ಮಾಡಿದ್ದು ಮದುವೆಯಾದಗಿನಿಂದಲೂ ಇಬ್ಬರೂ ಅನ್ಯೂನ್ಯವಾಗಿದ್ದು, ಈಗ್ಗೆ ಸುಮಾರು 03 ತಿಂಗಳಿನಿಂದಲೂ ಪ್ರತಿನಿತ್ಯ ಮಧ್ಯಪಾನ ಮಾಡಿಕೊಂಡು ಬಂದು ಚಾಸಾ-1 ರವರಿಗೆ ತಂದೆ-ತಾಯಿ ಇಲ್ಲದ ತಬ್ಬಲಿಯನ್ನು ಮದುವೆಯಾಗಿದ್ದೇನೆ, ನನಗೆ ಕುಡಿಯಲು ಹಣ ಕೊಡು ಎಂದು ಚಾಸಾ-2 ಮತ್ತು 3 ರವರಿಗೂ ಲೋಫರ್ ಗಳಾ ಎಂದು ಅವಾಚ್ಯವಾಗಿ ಬೈದು ಮಾನಸಿಕವಾಗಿ ಹಿಂಸೆ ಕಿರುಕುಳ ನೀಡುತ್ತಿದ್ದು, ಆರೋಪಿಯು ಮನೆಗೆ ಬಂದು ಚಾಸಾ-1 ರಿಂದ 3 ರವರಿಗೆ ಕುಡಿಯಲು ಹಣ ಕೊಡಿ ಇಲ್ಲದಿದ್ದರೆ ನೀವು ಮೂರು ಜನರೂ ಮನೆ ಬಿಟ್ಟು ಹೋಗಿ, ಇಲ್ಲವಾದರೆ ಬೇರೆ ಎಲ್ಲಾದರೂ ಹೋಗಿ ಸಾಯಿರಿ ಎಂದು ಬೈದು, ಚಾಸಾ-1 ರವರಿಗೆ ಕೈಯಿಂದ ಮೈಕೈಗೆ ಹೊಡೆದು, ಕಾಲಿನಿಂದ ಒದ್ದು ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ಕಿರುಕುಳ ನೀಡಿರುವುದು ತನಿಖೆಯಿಂದ ದೃಡಪಟ್ಟಿದ್ದರಿಂದ ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳ ರೀತ್ಯಾ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ಆರೋಪಿ ಜಾಮೀನಿನ ಮೇಲಿರುತ್ತಾರೆ. ಆದೇಶಿಕೆ ಜಾರಿಯಾದ ನಂತರ ನ್ಯಾಯಾಲಯದ ಮುಂದೆ ಹಾಜರಾದ ಆರೋಪಿಗೆ ಪ್ರಕರಣದ ದಾಖಲೆಗಳ ನಕಲುಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ-207 ರ ಪ್ರಕಾರ ಒದಗಿಸಲಾಗಿದೆ. ಆರೋಪಿಯು ತಮ್ಮ ವಿರುದ್ಧದ ದೋಷಾರೋಪಣೆಯನ್ನು ಅಲ್ಲಗಳೆದಿರುವ ಕಾರಣ, ಅದನ್ನು

ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 10 ಜನ ಸಾಕ್ಷಿದಾರರನ್ನಾಗಿ ಪಟ್ಟಿ ಮಾಡಿದ್ದು, ಅದರಲ್ಲಿ ಚಾಸಾ–3, 2, 6, 8, 9 ಮತ್ತು 10 ರವರನ್ನು ಫ್ರಾಸಾ–1 ರಿಂದ 6 ಎಂದು ವಿಚಾರಣೆ ಮಾಡಿಕೊಂಡಿರುತ್ತದೆ ಮತ್ತು ಒಟ್ಟು 11 ದಾಖಲೆಗಳನ್ನು ನಿಪಿ–1 ರಿಂದ ನಿಪಿ–11 ಗುರುತಿಸಿಕೊಂಡಿರುತ್ತದೆ.

**4.** ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ ಮುಗಿದ ಬಳಿಕ ದಂಡ ಪ್ರಕ್ರಿಯಾ ಸಂಹಿತೆಯ ಕಲಂ–313 ಅಡಿಯಲ್ಲಿ ಆರೋಪಿ ಹೇಳಿಕೆಯನ್ನು ದಾಖಲಿಸಿಕೂಳ್ಳಲಾಗಿದೆ. ಆರೋಪಿಯು ತಮ್ಮ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಇರಿಸಿರುವುದಿಲ್ಲ.

**5.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

**6. ಈ ಕೆಳಗಿನ ಅಂಶಗಳು ನನ್ನ ಪರ್ಯಾಲೋಚನೆಗೆ ಉದ್ಭವಿಸುತ್ತವೆಃ**

1. ಆಲೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಸಿಂಗಾಪುರ ಗ್ರಾಮದಲ್ಲಿ ಚಾಸಾ–1 ರವರನ್ನು ಆರೋಪಿಗೆ ಕೊಟ್ಟು ಮದುವೆ ಮಾಡಿದ್ದು, ಮದುವೆಯಾದಾಗಿನಿಂದಲೂ ಇಬ್ಬರೂ ಅನ್ಯೋನ್ಯವಾಗಿದ್ದು, ಈಗ್ಗೆ ಸುಮಾರು 3 ತಿಂಗಳಿನಿಂದಲೂ ಪ್ರತಿನಿತ್ಯ ಮಧ್ಯಪಾನ ಮಾಡಿಕೊಂಡು ಬಂದು ಚಾಸಾ–1 ರವರಿಗೆ ತಂದೆ–ತಾಯಿ ಇಲ್ಲದ ತಬ್ಬಲಿಯನ್ನು ನಾನು ಮದುವೆಯಾಗಿದ್ದೇನೆ. ನನಗೆ ಕುಡಿಯಲು ಹಣ ಕೊಡು

ಎಂದು ಚಾಸಾ–2 ಮತ್ತು 3 ರವರಿಗೆ ಲೋಫರ್ ಗಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ತರುವಷ್ಟರ ಮಟ್ಟಿಗೆ ಅವರನ್ನು ಕೊಪ್ರೋದ್ರಿಕ್ತಗೊಳಿಸಿರುತ್ತಾರೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯತೀತವಾಗಿ ರುಜುವಾತು ಪಡಿಸುತ್ತಾರೆಯೇ?

2. ಮೇಲೆ ಹೇಳಿದ ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಚಾಸಾ–1 ರವರಿಗೆ ಮಾನಸಿಕ ಹಿಂಸೆ ಕಿರುಕುಳ ನೀಡಿ ದಿಃ03.03.2019 ರಂದು ರಾತ್ರಿ ಸುಮಾರು 10.30 ಗಂಟೆ ಸಮಯದಲ್ಲಿ ಮನೆಗೆ ಬಂದು ಚಾಸಾ–1 ರಿಂದ 3 ರವರಿಗೆ ಕುಡಿಯಲು ಹಣ ಕೊಡಿ ಇಲ್ಲದಿದ್ದರೆ ನೀವು ಮೂರು ಜನರೂ ಮನೆ ಬಿಟ್ಟು ಹೋಗಿ ಎಂದು ಚಾಸಾ–1 ರವರಿಗೆ ಮೈಕೆಗೆ ಹೊಡೆದು, ಕಾಲಿನಿಂದ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

3. ಮೇಲೆ ಹೇಳಿದ ಸಮಯ ಹಾಗೂ ಸ್ಥಳದಲ್ಲಿ ಆರೋಪಿಯು ಚಾಸಾ–1 ರವರಿಗೆ ಮಾನಸಿಕ ಹಿಂಸೆ ಕಿರುಕುಳ ನೀಡಿ ದಿಃ03.03.2019 ರಂದು ರಾತ್ರಿ ಸುಮಾರು 10.30 ಗಂಟೆಯ ಸಮಯದಲ್ಲಿ ಮನೆಗೆ ಬಂದು ಚಾಸಾ–1 ರಿಂದ 3 ರವರಿಗೆ ಕುಡಿಯಲು ಹಣ ಕೊಡಿ ಇಲ್ಲದಿದ್ದರೆ ನೀವು ಮೂರು ಜನರೂ ಮನೆ ಬಿಟ್ಟು ಹೋಗಿ ಎಂದು ಚಾಸಾ–1 ರವರಿಗೆ ಕೈಯಿಂದ

ಮೈಕೈಗೆ ಹೊಡೆದು, ಕಾಲಿನಿಂದ ಒದ್ದು ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡುತ್ತಿರುತ್ತಾರೆ. ಆದ್ದರಿಂದ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 498(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

4. ಏನು ಆದೇಶ?

7. ಈ ಮೇಲಿನ ಅಂಶಗಳಿಗೆ ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ ನನ್ನ ಉತ್ತರಗಳು ಈ ಕೆಳಗಿನಂತಿವೆಃ

**ಅಂಶ 1 ರಿಂದ 3 : ನಕಾರಾತ್ಮಕವಾಗಿ**

**ಅಂಶ 4: ಅಂತಿಮ ಆದೇಶದಂತೆ**

**ಕಾರಣಗಳು**

8. **ಅಂಶ-1 ರಿಂದ 3**: ಅಭಿಯೋಜನೆಯು ಚಾಸಾ- 3, 2, 6, 4, 8 ಮತ್ತು 5, 9 ರವರನ್ನು ಪ್ರಾಸಾ-1 ರಿಂದ 5 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ಈ ಪ್ರಕರಣದ ಬಗ್ಗೆ ತಮಗೆ ಏನು ಗೊತ್ತಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-2ರವರು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-2 ಎಂದು, ಚಾಸಾ-1 ರವರ ಸಹಿಯನ್ನು ನಿಪಿ-2(ಎ) ಎಂದು, ಮಹಜರ್ ನ್ನು ನಿಪಿ-3 ಎಂದು, ಮಹಜರಿನಲ್ಲಿರುವ ಚಾಸಾ-1 ರವರ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಗಿರುತ್ತದೆ ಹಾಗೂ ಪ್ರಾಸಾ-4 ಮತ್ತು 5 ರವರು ಮಹಜರಿನಲ್ಲಿ ತಮ್ಮ

ಸಹಿಯನ್ನು ಗುರುತಿಸಿದ್ದು, ಸಹಿಗಳನ್ನು ನಿಪಿ–3(ಬಿ) ಮತ್ತು 3(ಸಿ) ಎಂದು ಗುರುತಿಸಲಾಗಿರುತ್ತದೆ.

**9.** ಅಭಿಯೋಜನೆಯು ಚಾಸಾ–10 ರವರನ್ನು ಪ್ರಾಸಾ–6 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ದಿಃ03.03.2019 ರಂದು ರಾತ್ರಿ 11.30 ಕ್ಕೆ ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ–1 ರವರು ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ಸಂಖ್ಯೆ 28/2019 ರಲ್ಲಿ ಪ್ರ.ವ.ವರದಿ ದಾಖಲಿಸಿದ್ದು, ದಿಃ04.03.2019 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ–1 ರವರು ತೋರಿಸಿದ ಸ್ಥಳದಲ್ಲಿ ಚಾಸಾ–8 ಮತ್ತು 9 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಒಂದು ಲಗ್ನ ಪತ್ರಿಕೆ ಮತ್ತು 2 ಭಾವಚಿತ್ರಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಿಪಿ–2 ಮತ್ತು 3 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–2(ಬಿ) ಮತ್ತು (ಡಿ) ಎಂದು ಗುರುತಿಸಲಾಗಿರುತ್ತದೆ. ಪ್ರ.ವ.ವರದಿಯನ್ನು ನಿಪಿ–6 ಎಂದು, ಸಹಿಯನ್ನು ನಿಪಿ–6(ಎ) ಎಂದು, ಲಗ್ನಪತ್ರಿಕೆ ಮತ್ತು ಆಧಾರ್ ಕಾರ್ಡ್, 2 ಭಾವಚಿತ್ರಗಳನ್ನು ನಿಪಿ–7 ರಿಂದ 10 ಎಂದು, ಅಸ್ಸೆಸ್ಮೆಂಟನ್ನು ನಿಪಿ–11 ಎಂದು, ಸಾಕ್ಷಿಯ ಸಹಿಯನ್ನು ನಿಪಿ–11(ಎ) ಎಂದು ಗುರುತಿಸಲಾಗಿರುತ್ತದೆ.

**10.** ಸದರಿಯವರನ್ನು ಆರೋಪಿಯ ವಕೀಲರು ಪಾಟೀಸವಾಲಿಗೆ ಗುರಿಪಡಿಸಿದಾಗ ನಿಪಿ–2 ಮತ್ತು 3 ನ್ನು ತಾನೇ ಸೃಷ್ಟಿರುತ್ತಾರೆ, ಚಾಸಾ–1 ರವರು ಹೇಳಿಕೆ ನೀಡಿರುವುದಿಲ್ಲ, ನಿಪಿ–3 ನ್ನು ಠಾಣೆಯಲ್ಲಿ ಸೃಷ್ಟಿಸಿರುವ ಅಂಶವನ್ನು ನಿರಾಕರಿಸಿರುತ್ತಾರೆ.

**11.** ದೂರುದಾರರಾರಿರುವ ಚಾಸಾ−1 ಮರಣ ಹೊಂದಿರುತ್ತಾರೆ. ಪ್ರಾಸಾ−2 ರಿಂದ 9 ರವರು  ಸಹ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದರೂ ಕೂಡ ಪ್ರಾಸಾ−1, 2,  3 ರವರು ನೀಡಿದ್ದಾರೆ ಎನ್ನಲಾದ ಹೇಳಿಕೆಗಳನ್ನು ನಿಪಿ−1, 4, 5 ಎಂದು ಗುರುತಿಸುವ ವಿನಃ ಯಾವುದೇ ಮಹತ್ವದ ಅಂಶ ಕಂಡುಬಂದಿರುವುದಿಲ್ಲ.

**12.** ಪ್ರಾಸಾ−6 ರವರು ಆರಕ್ಷಕರಾಗಿದ್ದು, ಸದರಿಯವರು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯವನ್ನು ನುಡಿಯಲೇ ಬೇಕಿರುತ್ತದೆ. ಆದರೆ ಸದರಿಯವರ ಸಾಕ್ಷ್ಯಧಾರದ ಮೇಲೆ ಆರೋಪಿಯು ಆಪಾದಿಸಲಾದಂತೆ ಆರೋಪ ಎಸಗಿದ್ದಾರೆ ಎಂದು ಯಾವುದೇ ಸ್ವಾಭಾವಿಕ ಸಾಕ್ಷಿದಾರರಿಂದ ನಿರ್ಧಾರ ಮಾಡುವುದು ಸಮಂಜಸವಾಗಿರುವುದಿಲ್ಲ, ಯಾವುದೇ ಒಬ್ಬ ವ್ಯಕ್ತಿಯ ಅಪರಾಧವನ್ನು ರುಜುವಾತುಪಡಿಸುವ ಹಂತದಲ್ಲಿ ಅಭಿಯೋಜನೆಯು ಆರಕ್ಷಕ ಸಾಕ್ಷ್ಯದ ಜೊತೆಗೆ ಅಗತ್ಯ ದಾಖಲಾತಿಗಳು ಮತ್ತು ಸ್ವತಂತ್ರ ಸಾಕ್ಷಿದರರನ್ನು ನ್ಯಾಯಾಲಯದಲ್ಲಿ ವಿಚಾರಣೆಗೊಳಪಡಿಸಿ ಅವರಿಂದ ಪೂರಕ ಸಾಕ್ಷ್ಯಗಳನ್ನು ಹಾಜರುಪಡಿಸಿ ರುಜುವಾತುಪಡಿಸಬೇಕಿರುತ್ತದೆ. ಆರೋಪಿಯು ಆಪಾಧಿಸಲಾದ ಕೃತ್ಯವನ್ನು ಎಸಗಿದ್ದಾರೆ ಎನ್ನುವ ಬಗ್ಗೆ ಯಾವುದೇ ಕನಿಷ್ಠಮಟ್ಟದ ಸಾಕ್ಷ್ಯಾಧಾರಗಳೂ ಕೂಡಾ ನ್ಯಾಯಾಲಯದ ಮುಂದೆ ಲಭ್ಯವಿರುವುದಿಲ್ಲ ಹಾಗೂ ಪ್ರಾಸಾ−1 ರಿಂದ 6 ರವರ ಸಾಕ್ಷ್ಯದಲ್ಲಿ ಉದ್ಭವವಾಗಿರುವ ಅನುಮಾನದ ಲಾಭವನ್ನು ಆರೋಪಿಗೆ ನೀಡುತ್ತಾ ಇನ್ನೂ ಹೆಚ್ಚಿನ ಚರ್ಚೆಗೆ ಆಸ್ಪದ ನೀಡದೇ ಆರೋಪಿಯ ವಿರುದ್ಧ ಹೊರಿಸಲಾದ ದೋಷಾರೋಪಣೆಯನ್ನು

ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆ ವಿಫಲವಾಗಿದೆ ಎನ್ನುವುದಾಗಿ ತೀರ್ಮಾನಿಸಿ ಈ ಮೇಲಿನ 1 ರಿಂದ 3 ಅಂಶಗಳನ್ನು ***ನಕಾರಾತ್ಮಕವಾಗಿ*** ಉತ್ತರಿಸಿರುತ್ತೇನೆ.

**13. ಅಂಶ-4**: ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಆದೇಶಿಸುತ್ತಿದ್ದೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ವತಿರ್ಸುತ್ತಾ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಕಲಂ 504, 323 ಮತ್ತು 498(ಎ) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಬಾಬ್ತಿನ ಆರೋಪಿಯನ್ನು ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ಅಡಿಯಲ್ಲಿ ಆರೋಪಿಯು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮುಂದಿನ 6 ತಿಂಗಳುಗಳವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು, ನಂತರ ಆರೋಪಿಯು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

*(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತಗೊಳಿಸಿದ ತರ್ಜುಮೆಯನ್ನು ತಿದ್ದಿ ಸಹಿ ಮಾಡಿ ದಿನಾಂಕಃ **1ನೇ ಏಪ್ರಿಲ್ 2026** ರಂದು ತೆರೆದ ನ್ಯಾಯಾಲಯದಲ್ಲಿ ನಾನು ಉದ್ಘೋಷಿಸಿರುತ್ತೇನೆ.)*

**(ಶ್ರೀಮತಿ ಸ್ನೇಹಾ. ಎಂ.)**
ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಆಲೂರು.

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ:**

| | | |
|---|---|---|
| ಪ್ರಾಸಾ–1 | : | ರಾಕೇಶ್ |
| ಪ್ರಾಸಾ–2 | : | ಅನುಷ್ಕ |
| ಪ್ರಾಸಾ–3 | : | ದೇವರಾಜೇಗೌಡ |
| ಪ್ರಾಸಾ–4 | : | ಸಿದ್ದಲಿಂಗಯ್ಯ |
| ಪ್ರಾಸಾ–5 | : | ಕೃಷ್ಣೇಗೌಡ |
| ಪ್ರಾಸಾ–6 | : | ಚನ್ನೇಗೌಡ |

**ಅಭಿಯೋಜನೆ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿ:**

| | | |
|---|---|---|
| ನಿಪಿ–1 | : | ಪ್ರಾಸಾ–1 ರವರ ಹೇಳಿಕೆ |
| ನಿಪಿ–2 | : | ದೂರು |
| ನಿಪಿ–1(ಎ ಮತ್ತು ಬಿ) | : | ಸಹಿಗಳು |
| ನಿಪಿ–3 | : | ಮಹಜರ್ |
| ನಿಪಿ–3(ಎ ಮತ್ತು ಡಿ ) | : | ಸಹಿಗಳು |
| ನಿಪಿ–4 ಮತ್ತು 5 | : | ಹೇಳಿಕೆಗಳು |
| ನಿಪಿ–6 | : | ಪ್ರಥಮ ವರ್ತಮಾನ ವರದಿ |
| ನಿಪಿ–6(ಎ) | : | ಸಹಿ |
| ನಿಪಿ–7 | : | ಲಗ್ನಪತ್ರಿಕೆ |
| ನಿಪಿ–8 | : | ಆಧಾರ್ ಕಾರ್ಡ್ |
| ನಿಪಿ–9 ಮತ್ತು 10 | : | ಫೋಟೋಗಳು |
| ನಿಪಿ–11 | : | ತೆರಿಗೆ ಬೇಡಿಕೆ ವಹಿ (ಅಸೆಸ್ಮೆಂಟ್) |
| ನಿಪಿ–11(ಎ) | : | ಸಹಿ |

**ಅಭಿಯೋಜನೆ ಪರ ಗುರುತಿಸಲಾದೆ ಮುದ್ದೆಮಾಲುಗಳ ಪಟ್ಟಿ:**

– ಇಲ್ಲ–

**ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

– ಇಲ್ಲ–

**ಆರೋಪಿ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿ**

– ಇಲ್ಲ–

ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಆಲೂರು.